ಕುಮಟಾ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳು

796 - ಶ್ರೀ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಮಟಾ ವಿಧಾನ ಸಭೆಯ ಕ್ಷೇತ್ರದಲ್ಲಿ ನಬಾರ್ಡ್‌ನಿಂದ ಮಂಜೂರಾತಿಯಾಗಿರುವ ಕಾಮಗಾರಿಗಳಾವುವು?*

ಆ) *ನಿರ್ಣಯಕ್ಕಾಗಿ ಕಾದಿರುವ ಕಾಮಗಾರಿಗಳಾವುವು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 96-97ನೇ ಸಾಲಿನಲ್ಲಿ ಕುಮಟಾ ತಾಲ್ಲೂಕಿನಲ್ಲಿ 27.93 ಲಕ್ಷ ರೂ.ಗಳಿಗೆ ಕಾಟಗಲ್-ಉಪ್ಪಿನಪಟ್ಟಣ ಸಿರಗುಂಚಿ-ಮಳವಳ್ಳಿ ರಸ್ತೆ ಕಾಮಗಾರಿ ಮಂಜೂರಾಗಿದ್ದು ಇದು ಕುಮಟಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ.97-98ನೇ ಸಾಲಿನಲ್ಲಿ ಭಟ್ಕಲ್ ತಾಲ್ಲೂಕಿನಲ್ಲಿ 22.19 ಲಕ್ಷ ರೂ.ಗಳಿಗೆ ಕಡನೀರ್ ಹಳ್ಳಕ್ಕೆ ಸೇತುವೆ ಹಾಗೂ 17.97 ಲಕ್ಷ ರೂ.ಗಳಿಗೆ ಕುಮಟಾ ತಾ: ನಂದೋಳಿ ನಾಳಕ್ಕೆ ಸೇತುವೆ ಕಾಮಗಾರಿಗಳು ಮಂಜೂರಾಗಿವೆ. ಈ ಕಾಮಗಾರಿಗಳು ಕುಮಟಾ ಕ್ಷೇತ್ರದಲ್ಲಿ ಬರುತ್ತದೆ.

ಆ) ಯಾವುದೂ ಇರುವುದಿಲ್ಲ.

ಉಡುಪಿ ಜಿಲ್ಲೆಯಲ್ಲಿ ಅರಣ್ಯ ಭೂಮಿ

797 - ಶ್ರೀ ಕುಂಬೈ ಸುಂದರ್ ರಾವ್ (ಸುರತ್ಕಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉಡುಪಿ ಜಿಲ್ಲೆಯಲ್ಲಿ ಗುರುತಿಸಲಾಗಿರುವ ಪಂಚಾಯಿತಿ ಕಾಡು ಮತ್ತಿತರ ಅರಣ್ಯ ಭೂಮಿಗಳ ಒಟ್ಟು ವಿಸ್ತೀರ್ಣ ಎಷ್ಟು?*

ಆ) *ಅವಶ್ಯಕ ಮತ್ತು ಅತ್ಯಗತ್ಯ ಸಂದರ್ಭಗಳಲ್ಲಿ ಸದರಿ ಭೂಮಿಯನ್ನು ಅರ್ಹರು ಅಲ್ಪ ಪ್ರಮಾಣದಲ್ಲಿ ಪಡೆಯಲು ಅನುಸರಿಸಬೇಕಾದ ನಿಯಮಗಳೇನು?*

ಇ) *ಜಿಲ್ಲೆಯಲ್ಲಿ ಇದುವರೆಗೆ ಅನ್ಯ ಉದ್ದೇಶಗಳಿಗಾಗಿ ನೀಡಿದ ಜಮೀನಿನ ವಿಸ್ತೀರ್ಣ ಎಷ್ಟು?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) 77377.71 ಹೆಕ್ಟೇರು.

ಆ) ಅರಣ್ಯ (ಸಂರಕ್ಷಣಾ) ಕಾಯಿದೆ 1980 ಮತ್ತು ಅರಣ್ಯ ಸಂರಕ್ಷಣಾ ನಿಯಮಾವಳಿ ೧೯೮೧ ರಲ್ಲಿನ ಸೌಲಭ್ಯದಂತೆ ಅರಣ್ಯೇತರ ಉದ್ದೇಶಗಳಿಗಾಗಿ ಅರಣ್ಯ ಜಮೀನನ್ನು ಬಿಡುಗಡೆ ಮಾಡಬೇಕಾಗಿದ್ದಲ್ಲಿ ಭಾರತ ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗಿರುತ್ತದೆ.

ಇ) ಒಟ್ಟು 115.14 ಹೆಕ್ಟೇರ್.